# ಪ್ರಕಟಣೆ

2020-21ನೇ ಸಾಲಿನ ಬಿ.ಡಿ ದಾಖಲಾತಿ ಪ್ರಕ್ರಿಯೆಗೆ ಸಂಬಂಧಿಸಿದಂತೆ, ದಿನಾಂಕ: 06-02-2021 ರಿಂದ 16-02-2021ರವರೆಗೆ ಜಿಲ್ಲಾ ನೋಡಲ್/ಪರಿಶೀಲನಾ ಕೇಂದ್ರಗಳಲ್ಲಿ ನಡೆದ ಮೂಲ ದಾಖಲೆಗಳ ಪರಿಶೀಲನೆಗೆ ಹಾಜರಾದ ಅರ್ಹ ಅಭ್ಯರ್ಥಿಗಳನ್ನು ಮಾತ್ರ ಪರಿಗಣಿಸಿ, ಕಾಲೇಜು ಹಂಚಿಕೆ ಸಹಿತ ತಾತ್ಕಾಲಿಕ ಆಯ್ಕೆಯ ಅಣಕು ಸೀಟು ಹಂಚಿಕೆಯ ಪಟ್ಟಿಯನ್ನು ದಿನಾಂಕ: 22-02-2021ರಂದು ವೆಬ್ ಸೈಟ್ www.schooleducation.kar.nic.in ನಲ್ಲಿ ಪ್ರಕಟಿಸಲಾಗಿದೆ.

1. ಪರಿಶೀಲನಾ ವೇಳೆಯಲ್ಲಿ ಅಪೂರ್ಣ ದಾಖಲೆಗಳನ್ನು (Partial Documents) ಸಲ್ಲಿಸಿದ್ದ ಅಭ್ಯರ್ಥಿಗಳಿಗೆ ತಮ್ಮ ಮೂಲ ದಾಖಲೆಯನ್ನು ಪರಿಶೀಲನೆಗೆ ಒಳಪಡಿಸಲು ಅವಕಾಶ ಕಲ್ಪಿಸಿದೆ. ಅಂತಹ ಅಭ್ಯರ್ಥಿಗಳು ಸಂಬಂಧಪಟ್ಟ **ಜಿಲ್ಲಾ ನೋಡಲ್/ ಪರಿಶೀಲನಾ ಕೇಂದ್ರದಲ್ಲಿ ಸೂಕ್ತ ದಾಖಲೆಗಳೊಂದಿಗೆ ದಿನಾಂಕ: 23-02-2021 ರಿಂದ 25-02-2021ರವರೆಗೆ ಪರಿಶೀಲನೆಗೆ ಹಾಜರಾಗುವುದು.**
2. ಕಾಲೇಜು ಹಂಚಿಕೆ ಸಹಿತ ತಾತ್ಕಾಲಿಕ ಆಯ್ಕೆಯ ಅಣಕು ಪಟ್ಟಿ(Mock Allotment List)ಗೆ ಆಕ್ಷೇಪಣೆಗಳಿದ್ದಲ್ಲಿ ಅಂತಹ ಅಭ್ಯರ್ಥಿಗಳು ಸಂಬಂಧಪಟ್ಟ **ಜಿಲ್ಲಾ ನೋಡಲ್/ ಪರಿಶೀಲನಾ ಕೇಂದ್ರದಲ್ಲಿ ಸೂಕ್ತ ದಾಖಲೆಗಳೊಂದಿಗೆ ಆಕ್ಷೇಪಣೆಯನ್ನು ದಿನಾಂಕ: 23-02-2021 ರಿಂದ 25-02-2021ರವರೆಗೆ** ಖುದ್ದಾಗಿ ಸಲ್ಲಿಸುವುದು.
3. ಸದರಿ ಪಟ್ಟಿಯಲ್ಲಿನ ಅಭ್ಯರ್ಥಿಗಳಿಗೆ ಆನ್ ಲೈನ್ ಅರ್ಜಿಯಲ್ಲಿ ನಮೂದಿಸಿರುವ ಆದ್ಯತೆಯ ಅನುಸಾರ ಸಂಭವನೀಯ ಕಾಲೇಜು ಹಂಚಿಕೆಯಾಗಿರುತ್ತದೆ. **ಅಭ್ಯರ್ಥಿಗಳು ತಮಗೆ ಕಾಲೇಜು ಹಂಚಿಕೆಯಾಗಿರುವ ಬಗ್ಗೆ ಪರಿಶೀಲಿಸಿಕೊಂಡು, ಅಗತ್ಯವಿದ್ದಲ್ಲಿ ಮತ್ತೊಮ್ಮೆ Option Entry ಅನ್ನು ನೀಡಲಾದ BEd-2020-21-Mock Seat Allotment List ನ್ನು ಕ್ಲಿಕ್ ಮಾಡುವುದರ ಮೂಲಕ ಅಭ್ಯರ್ಥಿಯು ತಮ್ಮ Username ಮತ್ತು Password ಅನ್ನು ನಮೂದಿಸುವುದರೊಂದಿಗೆ Login ಆಗಿ ದಿನಾಂಕ: 23-02-2021ರಿಂದ 25-02-2021 ರ ಒಳಗಾಗಿ Option Entry ದಾಖಲಿಸಲು ತಿಳಿಸಿದೆ. ಈ ಕೆಳಕಂಡಂತೆ ನೀಡಿರುವ ಸೂಚನೆಗಳನ್ನು ಅಭ್ಯರ್ಥಿಗಳು ತಪ್ಪದೇ ಓದಿ ಅರ್ಥೈಸಿಕೊಂಡು Option Entry ಮಾಡುವುದು.**

**ಅಭ್ಯರ್ಥಿಗಳಿಗೆ ಸೂಚನೆಗಳು**

- 2020-21ನೇ ಸಾಲಿನ ಬಿ.ಇಡಿ ಕೋರ್ಸಿನ ಪ್ರವೇಶಕ್ಕಾಗಿ ಅರ್ಹ ಅಭ್ಯರ್ಥಿಗಳು ದಾಖಲಿಸಿರುವ ಇಚ್ಛೆ/ಆಯ್ಕೆಗಳನ್ನು ದಾಖಲಿಸಿ ಮೆರಿಟ್ ಮತ್ತು ರೋಸ್ಟರ್ ಪದ್ಧತಿ ಆಧಾರದ ಮೇಲೆ ಅಣುಕು ಸೀಟು ಹಂಚಿಕೆಯನ್ನು ಮಾಡಿ ಫಲಿತಾಂಶವನ್ನು ದಿನಾಂಕ: 22-02-2021 ರಂದು ಇಲಾಖೆಯ ವೆಬ್ ಸೈಟಿನಲ್ಲಿ ಅಭ್ಯರ್ಥಿಗಳ ಮಾಹಿತಿಗಾಗಿ ಪ್ರಕಟಿಸಲಾಗಿದೆ.

- ಅಣಕು ಪ್ರಕ್ರಿಯೆಯ (Mock Allotment) ಪಟ್ಟಿಯು ಕೇವಲ ತಾತ್ಕಾಲಿಕವಾಗಿದ್ದು, ಅಭ್ಯರ್ಥಿಗಳಿಗೆ ಅನುಕೂಲಿಸುವ ಸಲುವಾಗಿ ಈ ಸೌಲಭ್ಯವನ್ನು ಒದಗಿಸಲಾಗಿದೆ. ಇದರಿಂದ ಅಭ್ಯರ್ಥಿಗಳು ಯಾವುದೇ ಗಾಬರಿ ಹೊಂದುವ ಅವಶ್ಯಕತೆ ಇರುವುದಿಲ್ಲ.

- ದಾಖಲಾತಿ ಬಯಸುವ ಕಾಲೇಜಿಗೆ ಹೆಚ್ಚಿನ ಇಚ್ಛೆ/ಆಯ್ಕೆಗಳನ್ನು ನೀಡಲು ಅಭ್ಯರ್ಥಿಗಳಿಗೆ ತಿಳಿಸಿದ್ದರೂ ಕೂಡ ಎರಡು ಅಥವಾ ಮೂರು ಆದ್ಯತೆಗಳನ್ನು ಮಾತ್ರ ನಮೂದಿಸಿರುತ್ತೀರಿ. ಆದ್ದರಿಂದ ಹೆಚ್ಚಿನ ಇಚ್ಛೆ/ಆಯ್ಕೆಗಳನ್ನು ನೀಡಲು ಇನ್ನೂ 03 ದಿನ ಕಾಲಾವಕಾಶ ನೀಡಲಾಗುತ್ತಿದೆ.

- ಅಭ್ಯರ್ಥಿಗಳು ಅಣುಕು ಫಲಿತಾಂಶವನ್ನು ಪರಿಶೀಲಿಸಿದ ನಂತರ ಇಚ್ಛೆ/ಆಯ್ಕೆಗಳನ್ನು ಅವಶ್ಯವಿದ್ದಲ್ಲಿ ಬದಲಾಯಿಸಬಹುದಾಗಿದೆ/ಸೇರಿಸಬಹುದಾಗಿದೆ/ಅಳಿಸಬಹುದಾಗಿದೆ. **ಅಭ್ಯರ್ಥಿಗಳು ಆದ್ಯತಾ ಸಂಸ್ಥೆಯನ್ನು ದಾಖಲಿಸಲು ಇದು ಕಟ್ಟಕಡೆಯ ಅವಕಾಶವಾಗಿದೆ.** ನಿಗದಿತ ದಿನಾಂಕ ಮತ್ತು ಸಮಯದ ನಂತರ ಬದಲಾವಣೆಗಳನ್ನು ಮಾಡಲು ಅವಕಾಶವಿರುವುದಿಲ್ಲ. **ಈ ಅವಕಾಶವನ್ನು ಬಳಸಿಕೊಂಡು ಅಭ್ಯರ್ಥಿಗಳು ಸಾಕಷ್ಟು ಕಾಲೇಜುಗಳಿಗೆ ಆದ್ಯತೆಯನ್ನು ನೀಡಲು ತಿಳಿಸಿದೆ.**

- **ಅಂತೆಯೇ ಅಭ್ಯರ್ಥಿಗಳು ತಾನು ಅರ್ಜಿಯಲ್ಲಿ ನಮೂದಿಸಿದ ಯಾವುದೇ ಸಂಸ್ಥೆಯಲ್ಲಿ ಸೀಟು ಹಂಚಿಕೆಯಾಗದಿದ್ದ ಸಂದರ್ಭದಲ್ಲಿ ರಾಜ್ಯದ ಇತರೆ ಯಾವುದೇ ಜಿಲ್ಲೆಯಲ್ಲಿ ದಾಖಲಾಗಲು ಬಯಸಿದ್ದಲ್ಲಿ, ತಾನು ದಾಖಲಾತಿ ಬಯಸುವ ಜಿಲ್ಲೆಯ ಆದ್ಯತೆಯನ್ನೂ ಸಹಾ ನಮೂದಿಸಲು ಅವಕಾಶ ಕಲ್ಪಿಸಲಾಗಿದೆ. ಸದರಿ ಅವಕಾಶವನ್ನು ಬಳಸಿಕೊಂಡು ಜಿಲ್ಲಾ ಆದ್ಯತೆಗಳನ್ನೂ ಸಹಾ ದಾಖಲಿಸುವುದು.**

- ಅಭ್ಯರ್ಥಿಗಳ ಅನುಕೂಲಕ್ಕಾಗಿ ಈಗಾಗಲೇ ಆನ್ ಲೈನ್ ಅರ್ಜಿಯಲ್ಲಿ ಅಭ್ಯರ್ಥಿಗಳು ದಾಖಲಿಸಿರುವ ಇಚ್ಛೆ/ಆಯ್ಕೆಗಳನ್ನು ಪರಿಗಣಿಸಿ ಅಣಕು ಸೀಟು ಹಂಚಿಕೆಯನ್ನು (Mock Allotment) ಮಾಡಿ ಅಣಕು ಸೀಟು ಹಂಚಿಕೆಯ ಫಲಿತಾಂಶವನ್ನು ಪ್ರಕಟಿಸಲಾಗಿದೆ.

- ಇದರಿಂದಾಗಿ ಅಭ್ಯರ್ಥಿಗಳಿಗೆ ತಮಗೆ ಯಾವ ಕ್ರಮಾಂಕದ ಸೀಟು ಸಿಕ್ಕಿದೆ ಅಥವಾ ಸೀಟು ಸಿಕ್ಕಿಲ್ಲ ಎಂಬುದು ತಿಳಿದುಬರುತ್ತದೆ. ಅಣಕು ಸೀಟು ಹಂಚಿಕೆಯ ಫಲಿತಾಂಶವನ್ನು ಪರಿಶೀಲಿಸಿದ ನಂತರ ಅಭ್ಯರ್ಥಿಗಳು ತಮಗೆ ಯಾವ ಸೀಟು ದೊರಕಿದೆ ಎನ್ನುವುದಕ್ಕಿಂತ ಯಾವ ಸೀಟುಗಳು ದೊರಕಿಲ್ಲ ಎಂಬುದನ್ನು ಕೂಡ ಮನಗಾಣಬೇಕು.

- ಅಣಕು ಸೀಟು ಹಂಚಿಕೆಯ ಫಲಿತಾಂಶದ ಜೊತೆಯಲ್ಲಿ Cut-Off rank ನ ವಿವರವನ್ನು ಅಭ್ಯರ್ಥಿಗಳ ಮಾಹಿತಿಗಾಗಿ ವೆಬ್ ಸೈಟಿನಲ್ಲಿ ಪ್ರಕಟಿಸಲಾಗುವುದು. Cut-Off rank ನ ವಿವರವನ್ನು ಪರಿಶೀಲಿಸಿಕೊಳ್ಳಲು ಅಭ್ಯರ್ಥಿಗಳಗೆ ಸೂಚಿಸಿದೆ.

- ತಮಗೆ ಬೇಕಾಗಿರುವ ಸೀಟು ತಮಗಿಂತ ಕೆಳಗಿನ ಹಂತದ rank ನವರಿಗೆ ಹಂಚಿಕೆಯಾಗಿದೆ ಎಂದರೆ, ಆ ಸೀಟುಗಳ Option ಗಳನ್ನು ತಾವು ದಾಖಲಿಸಿಲ್ಲದಿರಬಹುದು ಅಥವಾ ತಮ್ಮ ಆದ್ಯತಾ ಕ್ರಮದಲ್ಲಿ ದಾಖಲಿಸದೆ ಕೊನೆಯ ಕ್ರಮಾಂಕದಲ್ಲಿ ದಾಖಲಿಸಿದ್ದೀರಿ ಎಂದರ್ಥ. ಇವೆಲ್ಲವನ್ನು ಪರಿಶೀಲಿಸಿಕೊಂಡು ತಮಗೆ ಬೇಕಾದ Option ಗಳನ್ನು ಸರಿಯಾದ ಆದ್ಯತಾ ಕ್ರಮದಲ್ಲಿ ದಾಖಲಿಸಲು ಅಥವಾ ಮಾರ್ಪಡಿಸಿಕೊಳ್ಳಲು ಅಣಕು ಸೀಟು ಹಂಚಿಕೆಯ ನಂತರ ಅಭ್ಯರ್ಥಿಗಳಿಗೆ ಅವಕಾಶ ನೀಡಲಾಗಿರುತ್ತದೆ.

- ಮೊದಲನೇ ಸುತ್ತಿಗೆ ಇಚ್ಛೆ/ಆಯ್ಕೆಗಳನ್ನು ದಾಖಲಿಸದೇ ಇರುವ ಅರ್ಹ ಅಭ್ಯರ್ಥಿಯೂ ಸಹ ಇಷ್ಟವಿದ್ದಲ್ಲಿ ಇಚ್ಛೆ/ಆಯ್ಕೆಗಳನ್ನು ಆದ್ಯತಾ ಕ್ರಮದಲ್ಲಿ ಅಣುಕು ಸೀಟು ಹಂಚಿಕೆಯ ಫಲಿತಾಂಶದ ನಂತರವೂ ದಾಖಲಿಸಬಹುದಾಗಿರುತ್ತದೆ.

- ಅಣುಕು ಸೀಟು ಹಂಚಿಕೆಯ ನಂತರ ಅಭ್ಯರ್ಥಿಗಳು ಬದಲಾಯಿಸುವ/ಮಾರ್ಪಡಿಸಿ ಅಂತಿಮವಾಗಿ ದಾಖಲಿಸುವ ಇಚ್ಛೆ/ಆಯ್ಕೆಗಳನ್ನು ಪರಿಗಣಿಸಿ ಮೆರಿಟ್ ಮತ್ತು ರೋಸ್ಟರ್ ಪದ್ಧತಿ ಆಧಾರದ ಮೇಲೆ ಮೊದಲನೇ ಸುತ್ತಿನ ನೈಜ ಸೀಟು ಹಂಚಿಕೆಯನ್ನು ಮಾಡಿ ಫಲಿತಾಂಶವನ್ನು ಪ್ರಕಟಿಸಲಾಗುವುದು.

- ಅಣುಕು ಸೀಟು ಹಂಚಿಕೆಯ ನಂತರ ಅಭ್ಯರ್ಥಿಗಳು ಬದಲಾಯಿಸುವ/ಮಾರ್ಪಡಿಸಿ ಅಂತಿಮವಾಗಿ ದಾಖಲಿಸುವ ಇಚ್ಛೆ/ಆಯ್ಕೆಗಳನ್ನು ಪರಿಗಣಿಸಿ ಮೆರಿಟ್ ಮತ್ತು ರೋಸ್ಟರ್ ಪದ್ಧತಿ ಆಧಾರದ ಮೇಲೆ ಸಿಟು ಹಂಚಿಕೆ ಮಾಡುವುದರಿಂದ, ಅಣುಕು ಸೀಟು ಹಂಚಿಕೆಯಲ್ಲಿ ದೊರೆತ ಸೀಟೇ ನೈಜ ಸೀಟು ಹಂಚಿಕೆಯಲ್ಲಿ ದೊರಕಬಹುದು ಅಥವಾ ದೊರಕದೇ ಇರಬಹುದು.

- ಅಣುಕು ಸೀಟು ಹಂಚಿಕೆಯು ಅಭ್ಯರ್ಥಿಗಳಿಗೆ ಕೇವಲ ಸೀಟು ಹಂಚಿಕೆಯ ಬಗ್ಗೆ ಮಾಹಿತಿ ನೀಡುವುದಷ್ಟೇ ಆಗಿದ್ದು, ಅಣುಕು ಸೀಟು ಹಂಚಿಕೆಯಲ್ಲಿ ಸಿಗುವ ಸೀಟೇ ನೈಜ ಸೀಟು ಹಂಚಿಕೆಯಲ್ಲಿ ದೊರಕುತ್ತದೆ ಎಂದು ಖಚಿತಪಡಿಸಿಕೊಳ್ಳುವಂತಿಲ್ಲ.

- ಅಣುಕು ಸೀಟು ಹಂಚಿಕೆಯ ಫಲಿತಾಂಶದ ಜೊತೆಯಲ್ಲಿ ಅಭ್ಯರ್ಥಿಗಳ ಮಾಹಿತಿಗಾಗಿ Cut off Rank ಅನ್ನೂ ಸಹ ಪ್ರಕಟಿಸಲಾಗಿರುತ್ತದೆ. ಅಭ್ಯರ್ಥಿಗಳು ತಾವು ದಾಖಲಿಸಿರುವ ಇಚ್ಛೆ/ಆಯ್ಕೆಗಳ ಆದ್ಯತಾ ಕ್ರಮಗಳನ್ನು ಪರಿಶೀಲಿಸಿಕೊಳ್ಳಬಹುದಾಗಿದೆ.

- ಅಣುಕು ಸೀಟು ಹಂಚಿಕೆಯಲ್ಲಿ ಯಾವುದೇ ಸೀಟು ಹಂಚಿಕೆಯಾಗದ ಅಭ್ಯರ್ಥಿಗಳು ತಾವು ದಾಖಲಿಸಿರುವ ಇಚ್ಛೆ/ಆಯ್ಕೆಗಳ ಆದ್ಯತಾ ಕ್ರಮಗಳನ್ನು ಪರಿಶೀಲಿಸಿ, ಇಷ್ಟವಿದ್ದಲ್ಲಿ ಇನ್ನೂ ಹೆಚ್ಚಿನ ಇಚ್ಛೆ/ಆಯ್ಕೆಗಳನ್ನು ಆದ್ಯತಾ ಕ್ರಮದಲ್ಲಿ ನೀಡಬಹುದು.

- ಅಣುಕು ಸೀಟು ಹಂಚಿಕೆಯ ಫಲಿತಾಂಶದ ಆಧಾರದ ಮೇಲೆ ಅಭ್ಯರ್ಥಿಗಳು ಕಾಲೇಜಿನಲ್ಲಿ ಪ್ರವೇಶ ಪಡೆಯುವಂತಿಲ್ಲ.
- ಸೀಟು ಹಂಚಿಕೆಯು, ಅಭ್ಯರ್ಥಿಗಳ ಮೆರಿಟ್ ಹಾಗೂ ರೋಸ್ಟರ್ ಪದ್ಧತಿಯ ಆಧಾರದ ಮೇಲೆ ಸಂಪೂರ್ಣವಾಗಿ ಅಭ್ಯರ್ಥಿಗಳು ಆದ್ಯತಾ ಕ್ರಮದಲ್ಲಿ ದಾಖಲಿಸುವ ಇಚ್ಛೆ/ಆಯ್ಕೆಗಳನ್ನು ಅವಲಂಬಿಸಿರುತ್ತದೆ.

**ಸೀಟು ಹಂಚಿಕೆ ವಿಧಾನ**

ಅಭ್ಯರ್ಥಿಗಳು ದಾಖಲಾಗಲು ಬಯಸುವ ಆದ್ಯತೆಗಳನ್ನು ಪರಿಗಣಿಸಿ ಮೆರಿಟ್/ ರೋಸ್ಟರ್ ಆಧಾರದ ಮೇಲೆ ಸೀಟು ಹಂಚಿಕೆ ಮಾಡಲಾಗುತ್ತದೆ. ಅಭ್ಯರ್ಥಿಗಳು ದಾಖಲಿಸುವ ಒಟ್ಟು Option ಗಳಲ್ಲಿ ಮೊದಲನೆಯ ಕ್ರಮಾಂಕದಿಂದ ಸೀಟು ಹಂಚಿಕೆಯ ಲಭ್ಯತೆಯನ್ನು ನೋಡಿ ಮೆರಿಟ್/ ರೋಸ್ಟರ್ ಆಧಾರದ ಮೇಲೆ ಸೀಟು ಹಂಚಿಕೆ ಮಾಡಲಾಗುತ್ತದೆ. ಉದಾಹರಣೆಗೆ ಅಭ್ಯರ್ಥಿಯು ಒಟ್ಟು 260 Option ಗಳನ್ನು ದಾಖಲಿಸಿದ್ದಾನೆಂದರೆ, ಕಂಪ್ಯೂಟರ್ ಸೀಟು ಹುಡುಕುವುದನ್ನು ಕ್ರಮಾಂಕ 1 ರಿಂದ ಪ್ರಾರಂಭಿಸಿ (ಮೆರಿಟ್/ ರೋಸ್ಟರ್ ಅಧಾರದ ಮೇಲೆ ಸೀಟು ಲಭ್ಯತೆ ಹುಡುಕುವಿಕೆ ಆರಂಭವಾಗಿ) ಕೊನೆಯ ಕ್ರಮಾಂಕ 260ರ ವರೆಗೆ ಹುಡುಕುತ್ತದೆ. 1 ರಿಂದ 260 Option ಗಳಲ್ಲಿ, ಒಂದು ವೇಳೆ 120ನೆಯ ಕ್ರಮಾಂಕದ ವರೆಗೆ ಸೀಟು ಲಭ್ಯತೆ ಇಲ್ಲದಿದ್ದಲ್ಲಿ, 121ನೇ ಕ್ರಮಾಂಕದ Option ಗೆ ಸೀಟು ಲಭ್ಯತೆ ಇದ್ದರೆ 121ನೆಯ ಕ್ರಮಾಂಕದ Option ಗೆ ಸೀಟು ಹಂಚಿಕೆಯಾಗುತ್ತದೆ ಹಾಗೂ ಅಭ್ಯರ್ಥಿಯು ದಾಖಲಿಸಿರುವ 122ನೇ ಕ್ರಮಾಂಕದಿಂದ 260ರ ವರೆಗಿನ ಕ್ರಮಾಂಕದ Option ಗಳನ್ನು ಹುಡುಕುವುದು ನಿಲ್ಲಿಸುತ್ತದೆ. ಆದ್ದರಿಂದ ಅಭ್ಯರ್ಥಿಗಳು ಆದ್ಯತೆಯನ್ನು ನೀಡುವಾಗ ಎಚ್ಚರಿಕೆಯಿಂದ ಕ್ರಮಾಂಕದ ನಂಬರ್ ಗಳನ್ನು ನೀಡುವುದು ಉತ್ತಮ.

ಅಭ್ಯರ್ಥಿಯು ದಾಖಲಾತಿ ಬಯಸುವ ಕಾಲೇಜುಗಳಿಗೆ ಎಷ್ಟು Option ಗಳನ್ನು ಬೇಕಾದರೂ ದಾಖಲಿಸಬಹುದು. ಇಷ್ಟೇ Option ಗಳನ್ನು ನೀಡಬೇಕು ಎಂದಿರುವುದಿಲ್ಲ. ಪರಿಪೂರ್ಣವಾಗಿ ತಮಗೆ ಇಷ್ಟವಿರುವ ಕಾಲೇಜುಗಳನ್ನು ಆದ್ಯತೆಯ ಮೇರೆಗೆ ದಾಖಲಿಸಬೇಕು. ಮೊದಲನೆಯ ಕ್ರಮಾಂಕ First Option ಅಂದರೆ 100% ಸಂಪೂರ್ಣವಾಗಿ ತಮಗೆ ಇಷ್ಟವಿರುವ ಕಾಲೇಜು ಎಂದರ್ಥ. ಮೆರಿಟ್/ ರೋಸ್ಟರ್ ಆಧಾರದ ಮೇಲೆ ಮೊದಲನೆ ಆದ್ಯತೆಯ ಕಾಲೇಜು ಸಿಗದಿದ್ದಲ್ಲಿ ಎರಡನೆಯ ಆದ್ಯತೆ ಕಾಲೇಜು ಬೇಕು, ಇದೂ ಸಿಗದಿದ್ದಲ್ಲಿ ಮೂರನೆ ಆದ್ಯತೆ ಕಾಲೇಜು ಬೇಕು, ಹೀಗೆ ನಾಲ್ಕು, ಐದು, ಆರು, ಏಳು, ಎಂಟು, ಒಂಭತ್ತು, ಹತ್ತು . . . . . ಐವತ್ತು. . . . . . . . . ನೂರು. . . . . . . . ಇನ್ನೂರು ಹೀಗೆ ಆದ್ಯತಾ ಕ್ರಮದಲ್ಲಿ ಸಂಖ್ಯೆಗಳನ್ನು ನಮೂದಿಸಬೇಕು. ಅಭ್ಯರ್ಥಿಗಳು ಆದ್ಯತೆಗಳನ್ನು (Options) ನೀಡುತ್ತಿದ್ದಾರೆಂದರೆ, ದಾಖಲಿಸಿರುವ Option ಗಳಲ್ಲಿ ಕ್ರಮಾಂಕ ಮತ್ತು ಮೆರಿಟ್/ ರೋಸ್ಟರ್ ಆಧಾರದ ಮೇಲೆ ಸೀಟು ಹಂಚಿಕೆಯಾದಲ್ಲಿ, ತನಗೆ ಹಂಚಿಕೆಯಾಗುವ ಸೀಟನ್ನು ಬೇಡ ಎನ್ನುವಂತಿಲ್ಲ/ ತಿರಸ್ಕರಿಸುವಂತಿಲ್ಲ.

ಸಹಿ/-

ವಿಶೇಷಾಧಿಕಾರಿ